CC No.1093/2016
CW-20 / PW.-4

**ಅಪರ ಸಿವಿಲ್ ನ್ಯಾಯಾಧೀಶರು ಜೆಎಂಎಫ್‌ಸಿ ನ್ಯಾಯಾಲಯ,**
**ಚನ್ನಪಟ್ಟಣ**
**CC No : 1093/2016**

**ದಿಃ17.11.2025**

ಸಾಕ್ಷಿಯನ್ನುಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿದಾರರ ಹೆಸರು | : | ಶಿವಪ್ಪ |
| ತಂದೆಯ ಹೆಸರು | : | ಮಲ್ಲಯ್ಯ |
| ವಯಸ್ಸು | : | 65 ವರ್ಷ |
| ಉದ್ಯೋಗ | : | ನಿವೃತ್ತ ಎ ಎಸ್ ಐ |
| ವಾಸಸ್ಥಳ | : | ಲಾಳ ಘಟ್ಟ, ಚನ್ನಪಟ್ಟಣ. |

ಮುಖ್ಯ ವಿಚಾರಣೆ ಎ.ಪಿ.ಪಿ ಯವರಿಂದ:

ನಾನು ಜೂನ್-2016 ರಿಂದ 2018ರ ರವರೆಗೆ ಚನ್ನಪಟ್ಟಣ ಪೂರ್ವ ಪೊಲೀಸ್ ಠಾಣೆಯಲ್ಲಿ ಎಎಸ್‌ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ20.08.2016 ರಂದು ನಾನು ಠಾಣಾ ಪ್ರಭಾರದಲ್ಲಿದಾದಗ ಚಾಸಾ-1ರವರು ಠ-ಣೆಗೆ ಹಾಜರಾಗಿ ದಿ 17.08.2016ರಂದು ತಮ್ಮ ತಾತನನ್ನು ದ್ವಿಚಕ್ರವಾಹನದಲ್ಲಿ ಕೂರಿಸಿಕೊಂಡು ಚನ್ನಪಟ್ಟಣದ ಲಕ್ಷ್ಮಿ ಆಸ್ಪತ್ರೆಯ ಎದುರಿನ ರಸ್ತೆಯಲ್ಲಿ ಹೋಗುತ್ತಿದ್ದಾಗ ಹಿಂಬದಿಯಿಂದ ಇನ್ನೊಬ್ಬ ದ್ವಿಚಕ್ರ ವಾಹನ ಡಿಕ್ಕಿ ಹೊಡೆದ ಪರಿಣಾಮ ನನ್ನ ತಾತನ ಬಲಗಾಲಿಗೆ ರಕ್ತ ಗಾಯ ಆಗಿ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲು ಮಾಡಿ ಸ್ವಲ್ಪ ದಿನ ನಾನೇ ಅವರನ್ನು ನೋಡಿಕೊಂಡು ತಡವಾಗಿ ದೂರು ಕೊಡಲು ಬಂದಿದ್ದೇನೆ ಎಂದು ಲಿಖಿತ ದೂರನ್ನು ಹಾಜರುಪಡಿಸಿದ್ದು ಸದರಿ ದೂರನ್ನು ನಾನು ಸ್ವೀಕರಿಸಿ ನಮ್ಮ ಠಾಣಾ ಮೊಕದ್ದಮೆ ಸಂಖ್ಯೆ

120/2016 ಎಂದು ನಮೂದಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ದಾಖಲು ಮಾಡಿರುತ್ತೇನೆ. ಪಿರ್ಯಾದು ಈಗಾಲೇ ನಿಪಿ 1 ಎಂದು ದಾಖಲಾಗಿದ್ದು, ಸಾಕ್ಷಿಯ ಸಹಿಯನ್ನು 1ಬಿ ಎಂದು, ಪ್ರ.ವರ್ತಮಾನ ವರದಿಯನ್ನು ನಿಪಿ-5, ಸಾಕ್ಷಿಯ ಸಹಿಯನ್ನು ನಿಪಿ-5ಎ ಎಂದು ಗುರುತಿಸಲಾಯಿತು. ಅದೇ ದಿನ ಸಂಜೆ 4-30 ರಿಂದ 5-30ರ ಸಮಯದಲ್ಲಿ ಘಟನಾ ಸ್ಧಳದ ಮಹಜರ್ ನ್ನು ಪಂಚರ ಸಮಕ್ಷಮ ಪಂಚನಾಮೆ ಜರುಗಿಸಿರುತ್ತೇನೆ. ಪಂಚನಾಮೆ ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2ಸಿ ಎಂದು ಗುರುತಿಸಲಾಯಿತು. ಸ್ಧಳ ಮಹಜರ್ ಮಾಡುವ ಕಾಲಕ್ಕೆ ತಯಾರು ಮಾಡಿದ ಕಚ್ಚಾ ನಕ್ಷೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಕಚ್ಚಾ ನಕ್ಷೆಯನ್ನು ನಿಪಿ-6 ಎಂದು, ಸಾಕ್ಷಿಯ ಸಹಿಯನ್ನು ನಿಪಿ-6ಎ ಎಂದು ಗುರುತಿಸಲಾಯಿತು.

ದಿ 29-08-2016ಕ್ಕೆ ಪಿರ್ಯಾದುದಾರರ ತಂದೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮರಣ ಹೊಂದಿರುತ್ತಾರೆ ಎಂದು ಮಾಹಿತಿ ಬಂದಿದ್ದು, ನಮ್ಮ ಠಾಣಾಧಿಕಾರಿ ನನ್ನನ್ನು ಶವ ತನಿಖಾ ವರದಿ ದಾಖಲು ಮಾಡಲು ಕಳುಹಿಸಿರುತ್ತಾರೆ. ಶವ ತನಿಖಾ ವರದಿಯನ್ನು ನಿಪಿ-7 ಎಂದು, ಸಾಕ್ಷಿಯ ಸಹಿಯನ್ನು ನಿಪಿ-7ಎ ಎಂದು ಗುರುತಿಸಲಾಯಿತು. ನಂತರ ಈ ಕೇಸಿನ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-19ರವರಿಗೆ ನೀಡಿರುತ್ತೇನೆ.

CC No.1093/2016
CW-20 / PW.-4

**ಪಾಟೀ ಸವಾಲುಃ ಆರೋಪಿ ಪರಃ ಶ್ರೀ  ವಕೀಲರಿಂದಃ**

ನಾನು ಹೇಳಿದ ಮುಖ್ಯ ವಿಚಾರಣೆಯಲ್ಲಿ ಪಿರ್ಯಾದುದಾರರು ಮೋಟಾರ್ ಸೈಕಲಿ ನಲ್ಲಿ ತಮ್ಮ ತಾತನನ್ನು ಕೂರಿಸಿಕೊಂಡು ಹೋಗುತ್ತಿದ್ದಾಗ ಇನ್ನೊಬ್ಬ ದ್ವಿಚಕ್ರ ಸವಾರ ಬಂದು ಡಿಕ್ಕಿಪಡಿಸಿದ್ದಾನೆ ಎಂದು ಹೇಳಿದ್ದು ಆದರೆ ಚಾಸಾ-2, 3, 5ರವರ ಹೇಳಿಕೆಗಳಲ್ಲಿ ಪಿರ್ಯಾದುದಾರರ ತಂದೆ ನಡೆದುಕೊಂಡು ಹೋಗುತ್ತಿದ್ದಾಗ ಬೈಕ್ ನಲ್ಲಿ ಬಂದು ಡಿಕ್ಕಿಪಡಿಸಿದ್ದಾರೆ ಎಂದರೆ ಸಾಕ್ಷಿ ನಾನು ಯಾರ ಹೇಳಿಕೆಯನ್ನು ಪಡೆದುಕೊಂಡಿಲ್ಲ ಎನ್ನುತ್ತಾರೆ. ಪಿರ್ಯಾದುದಾರರು ಅಪಘಾತದ ಪರಿಹಾರದ ಹಣ ಪಡೆಯಲು ಪಿರ್ಯಾದು ಸುಳ್ಳು ಪ್ರಕರಣ ದಾಖಲು ಮಾಡಿದ್ದಾರೆ ಎಂದರೆ ಸರಿಯಲ್ಲ. ಪಿರ್ಯಾದುದಾರರ ತಾತ ತೀರಿಕೊಂಡಾಗ ಅವರ ವಯಸ್ಸು 80 ವರ್ಷ ಆಗಿತ್ತು ಎಂದರೆ ಸರಿಯಲ್ಲ. ಪಿರ್ಯಾದುದಾರರು ವಿಮೆ ಹಣ ಪಡೆಯಲು ಪಿರ್ಯಾದುದಾರರು ಸುಳ್ಳು ದೂರು ದಾಖಲು ಮಾಡಿದ್ದು ನಾನು ಅವರಿಗೆ ಸಹಾಯ ಮಾಡಲು ಸುಳ್ಳು ಪ್ರಕರಣ ದಾಖಲು ಮಾಡಿ ಭಾಗಶಃ ಸುಳ್ಳು ವರದಿಯನ್ನು ನಮೂದಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳಕ್ಕೆ ಹೋಗಿ ಪಂಚರ ಸಮಕ್ಷಮ ತನಿಖೆ ಮಾಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಒ

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ.